**OS.No.45/2018**
**D.W-3**

**( ದಿನಾಂಕ.09-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ ಶ್ರೀ B.A.D ವಕೀಲರಿಂದ**

DW-2 ರವರರನ್ನು ನಾನು ನೋಡಿರುತ್ತೇನೆ. ಅವರು ಮಾತನಾಡುತ್ತಾರೆ ಹಾಗೂ ಚೆನ್ನಾಗಿ ಇದ್ದಾರೆ. ಆದರೆ ಓಡಾಡಲು ಬರುವುದಿಲ್ಲ. ತಾಂಡಾದಲ್ಲಿ ಹೋಗಿ ಅವರನ್ನು ಪ್ರಶ್ನೆ ಮಾಡಿದ್ದಲ್ಲಿ, ಅವರು ಉತ್ತರಿಸುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಒಂದು ಪಂಚಾಯತಿ ಆಗಿರುತ್ತದೆ. ಅದು ವಾದಿ ಮತ್ತು 5 ನೇ ಪ್ರತಿವಾದಿ ಶಾಂತಾಬಾಯಿ ನಡುವೆ ಜಮೀನು ಹಂಚಿಕೊಳ್ಳುವ ವಿಚಾರವಾಗಿ ಆಗಿರುತ್ತದೆ. ಆದರೆ ಎಷ್ಟು ವರ್ಷದ ಹಿಂದೆ ಆಗಿದೆ ಎಂದರೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿ ಗಂಡನಾದ ನಾಮದೇವನ ತಂದೆಯ ಹೆಸರು ಡಾಕು ಇರುತ್ತದೆ. ನಾಮದೇವರವರಿಗೆ 6 ಜನ ಅಣ್ಣ-ತಮ್ಮಂದಿರು. ನಾಮದೇವನಿಗೆ ಒಂದು ಜಮೀನು ಆತನ ಅಣ್ಣ-ತಮ್ಮಂದಿರ ಪಾಲಿನಲ್ಲಿ ಮ್ಯೂಟೇಶನ ಆಗಿದೆ ಎಂದರೆ ಸರಿ. ಅದೇ ಜಮೀನನ್ನು 5 ನೇ ಪ್ರತಿವಾದಿ ಗಂಡನನ್ನು ಮನೆಯಲ್ಲಿ ಇಟ್ಟುಕೊಂಡು ಮನೆ ಅಳಿಯ ಮಾಡಿಕೊಂಡು 5 ನೇ ಪ್ರತಿವಾದಿಗೆ ಸದರಿ ಜಮೀನನ್ನು ಕೊಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನು ಕೊಟ್ಟ ಕಾಲಕ್ಕೆ 5 ನೇ ಪ್ರತಿವಾದಿ ಮದುವೆ ಆಗಿರಲಿಲ್ಲ.

ನಾಮದೇವ 5 ನೇ ಪ್ರತಿವಾದಿಗೆ ಜಮೀನನ್ನು ಯಾವ ದಾಖಲೆಯ ಮೇಲೆ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಾಮದೇವ 5 ನೇ ಪ್ರತಿವಾದಿಗೆ ತಾನು ಇರುವ ಮನೆ ಮತ್ತು 5 ಎಕರೆ ಜಮೀನನ್ನು ಬಿಟ್ಟು ಕೊಟ್ಟಿರುತ್ತಾನೆ. ಸಾಕ್ಷಿ ಮುಂದುವರೆದು ನಾಮದೇವನ ದವಾಖಾನೆ ಖರ್ಚನ್ನು 5 ನೇ ಪ್ರತಿವಾದಿ ಮತ್ತು ಅವಳ ಗಂಡ ಭರಿಸಿರುತ್ತಾರೆ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿ ಮತ್ತು ಅವಳ ಗಂಡ ನಾಮದೇವ ಇತನ ವೈಧ್ಯಕೀಯ ಖರ್ಚ್ನು ಭರಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ವೈಧ್ಯಕೀಯ ಖರ್ಚಿನ ದಾಖಲೆಗಳನ್ನು ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಏಕೆಂದರೆ ನಾನು ಹೆಬ್ಬಟ್ಟಿನ ಮನುಷ್ಯ ಇರುತ್ತೇನೆಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾಮದೇವ 5 ನೇ ಪ್ರತಿವಾದಿಗೆ ಜೀವನಾಂಶದ ಬಾಬತ್ತು ಕೊಟ್ಟಿರುತ್ತಾನೆಂದು ನಾನು ಹೇಳಿ ಬರೆಸಿಲ್ಲ. ನಾಮದೇವನಿಂದ 5 ನೇ ಪ್ರತಿವಾದಿಗೆ ಮ್ಯೂಟೇಶನ ಯಾವ ರೀತಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಮ್ಯೂಟೇಶನ ದಾಖಲೆ ನೋಡಿಲ್ಲ.

ನಾಮದೇವನ ಹೆಂಡತಿಯಾದ 1 ನೇ ಪ್ರತಿವಾದಿ ಕೇಸುಬಾಯಿ ಹೆಸರಿನಲ್ಲಿ ಜಮೀನು ಹೇಗೆ ಬಂತು ನನಗೆ ಗೊತ್ತು. ನಾಮದೇವ ಮತ್ತು 1 ನೇ ಪ್ರತಿವಾದಿ ಇಬ್ಬರು ಬೇರೆಯವರ ಜಮೀನುಗಳನ್ನು ಪಾಲಿನ ಪ್ರಕಾರ ಸಾಗುವಳಿ ಮಾಡುತ್ತಿದ್ದರು,

ಅದರಿಂದ ಬಂದ ಉತ್ಪನ್ನದಿಂದ 1 ನೇ ಪ್ರತಿವಾದಿ ಕೇಸುಬಾಯಿ ಹೆಸರಿನಲ್ಲಿ ನಾಮದೇವ 5 ಎಕರೆ ಜಮೀನು ಕ್ರಯಕ್ಕೆ ಪಡೆದಿರುತ್ತಾರೆ. ಅದಕ್ಕೆ ಎಷ್ಟು ಕ್ರಯದ ಮೊತ್ತ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರ ಸೊಲ್ಲಾಪುರದಲ್ಲಿ 25-30 ವರ್ಷದ ಹಿಂದೆ ನೋಂದಣಿ ಆಗಿರುತ್ತದೆ. ಸದರಿ ಕ್ರಯಪತ್ರವನ್ನು ನಾನು ನೋಡಿಲ್ಲ.

1 ನೇ ಪ್ರತಿವಾದಿ ಜೀವಂತ ಇರುತ್ತಾಳೆ. 1 ನೇ ಪ್ರತಿವಾದಿಗೆ ಮಾತನಾಡಲು ಬರುತ್ತದೆ. ಅವಳಿಗೆ ಓಡಾಡಲು ಬರುವುದಿಲ್ಲ. ನಾಮದೇವನಿಗೆ ಖುಲ್ಲಾ ಜಾಗ ತನ್ನ ಹಿರಿಯರಿಂ ದ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ್ವಂತಾಗಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖುಲ್ಲಾ ಜಾಗವನ್ನು ಯಾರಿಂದ ಖರೀದಿಸಿರುತ್ತಾರೆಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬಗಾಡೆರವರಿಂದ ಒಬ್ಬರು ಜಮೀನು ತೆಗೆದುಕೊಂಡು ನಂತರ ಪ್ಲಾಟಗಳನ್ನು ನಿರ್ಮಾಣ ಮಾಡಿರುತ್ತಾರೆ, ಆವಾಗ ಸದರಿ ಖುಲ್ಲಾ ಜಾಗವನ್ನು ನಾಮದೇವ ಖರೀದಿಸಿರುತ್ತಾರೆ. ನಾಮದೇವ ಎಷ್ಟು ಹಣಕ್ಕೆ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರ ಆಗಿದೆ ಇಲ್ಲವೊ ನಾನು ನೋಡಿಲ್ಲ. ನಾಮದೇವನ ಹೆಸರಿನಲ್ಲಿ ಪಂಚಾಯತಿಯಲ್ಲಿ ಸದರಿ ಜಾಗವಿರುತ್ತದೆ. ಸದರಿ ಪಂಚಾಯತಿಯಲ್ಲಿ ಹೇಗೆ ಆಗಿದೆ ಎಂದರೆ ನನಗೆ ನೆನಪಿಲ್ಲ. ಸದರಿ ಜಾಗ ಪಂಚಾಯತಿಯಲ್ಲಿ 5 ನೇ ಪ್ರತಿವಾದಿ ಹೆಸರಿನಲಿ ಇರುತ್ತದೆ.

**D.W-3**

ಸದರಿ ಪಂಚಾಯತಿಯಲ್ಲಿ 5 ನೇ ಪ್ರತಿವಾದಿ ಹೆಸರಿನಲ್ಲಿ ನಾಮದೇವ ಮಾಡಿ ಹೋಗಿರುತ್ತಾನೆ. ಯಾವ ಅಧಾರದ ಮೇಲೆ ಆಗಿರುತ್ತದೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಹೆಸರಿನಲ್ಲಿ ಸದರಿ ಖುಲ್ಲಾ ಜಾಗ ಎಷ್ಟು ವರ್ಷ ಆಯಿತು ನನಗೆ ನೆನಪಿಲ್ಲ. ನಾಮದೇವ ಸದರಿ ಖುಲ್ಲಾ ಜಾಗವನ್ನು ಖರೀದಿಸುವ ಕಾಲಕ್ಕೆ ಎಷ್ಟು ಮೌಲ್ಯವುಳ್ಳದಾಗಿದ್ದು ನನಗೆ ಗೊತ್ತಿಲ್ಲ. ಸದರಿ ಖುಲ್ಲಾ ಜಾಗ ಆ ವೇಳೆಯಲ್ಲಿ ಸುಮಾರು 10 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದದುವರೆದ ಪಾಟೀ ಸವಾಲಿಗೆ ಸಮಯಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**